# <u>ಹರಿ ಚಿತ್ತ ಸತ್ಯಾ ಹರಿಚಿತ್ತ</u>

1. **Ref.:** Dasara Padagalu – Purandara Dasara Keerthane, Vol 4, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** The wordings are as per Ref. 1. The wordings in Ref.2 (difference in wordings are marked in yellow highlights) and that of the singer are matching.

ರಾಗ: ಪೂರ್ವಿ ಕಲ್ಯಾಣಿ ತಾಳ: ಅಟ್ಟ

ಹರಿ ಚಿತ್ತ ಸತ್ಯಾ ಹರಿ ಚಿತ್ತ ॥ ಪ ॥
ನರ ಚಿತ್ತಕ್ಕೆ ಬಂದದ್ದು, ಲವಲೇಶ ನಡೆಯದು ॥ ಅಪ ॥

ಸುದತಿ (ಮಡದಿ) ಮಕ್ಕಳ ಭಾಗ್ಯ ಬಯಸೋದು ನರ ಚಿತ್ತ
ಮದುವ್ಯಾಗದಿರುವುದು ಹರಿ ಚಿತ್ತವೂ
ಕುದುರೆ ಅಂದಣ ಆನೆ ಬಯಸೋದು ನರ ಚಿತ್ತ
ಪದಚಾರಿಯಾಗೋದು ಹರಿ ಚಿತ್ತವಯ್ಯ ॥ 1 ॥

ವಿಧ ವಿಧ ಯಾತ್ರೆಯ ಬಯಸೋದು ನರ ಚಿತ್ತ
ಒದಗಿ ಬರುವ ರೋಗ ಹರಿ ಚಿತ್ತವೂ
ಸದಾ ಅನ್ನ ದಾನವ ಬಯಸೋದು ನರ ಚಿತ್ತ
ಉದರಕ್ಕೆ ಅಳುವುದು ಹರಿ ಚಿತ್ತವಯ್ಯ ॥ 2 ॥

ಧರಣಿಯನು ಆಳಬೇಕೆಂಬುದು ನರ ಚಿತ್ತ
ಪರರ ಸೇವಿಸುವುದು ಹರಿ ಚಿತ್ತವೂ
ಪುರಂದರ ವಿಠಲನ ಬಯಸೋದು ನರ ಚಿತ್ತ
ದುರಿತವ ಕಳೆವದೇ ಹರಿ ಚಿತ್ತವಯ್ಯ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಅಂದಣ** – ಪಲ್ಲಕ್ಕಿ.

**ಪದಚಾರಿಯಾಗೋದು** – ಕಾಲಲ್ಲೋ ನಡೆಯಬೇಕಾಗಿ ಬರುವುದು.

**ಒದಗಿಬರುವ ರೋಗ** – ಯಾತ್ರಮಾಡಲು ಅಡ್ಡಿಯಾಗಿ.

**ಪುರಂದರ ವಿಠಲನ ಬಯಸೋದು…** – ಭಕ್ತಿಮಾಡುವುದು ಜೀವರ ಹೊಣೆ; ಪಾಪಗಳನ್ನು ಕಳೆದು, ಮುಕ್ತಿಗೆ ಬೇಕಾಗುವ ಜ್ಞಾನವನ್ನು ಕೊಡುವುದು ಪರಮಾತ್ಮನ ಹೊಣೆ.

**Classification:** Keerthane
**Ankita:** purandara vittala
**Location:** NA
**Category:** Jeevana Darshana, Bhakti
**Group Words:** Krishna, satya, chitta, patni, kudure, gaja, roga, anna, dana, bhumi,
**Pravachana:** NA
**Explanation:** Unknown